<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಅಫಜಲಪೂರ</u>

C.C No. 7/2015

CW-23/PW-6

ಹೆಸರು ः ರಮೇಶ
ತಂ/ಗಂ ಹೆಸರು ः ಚಂದಪ್ಪ
ವಯಸ್ಸು ः 66 ವರ್ಷ
ಉದ್ಯೋಗ ः ನಿವೃತ್ತ CPI
ವಾಸ ಸ್ಥಳ ः ರಾಯಚೂರು

---

<u>ದಿಃ **25-02-2026** ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಲಾಯಿತು.</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2008 ರಿಂದ 2011 ರವರೆಗೆ ಅಫಜಲಪುರ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 17-05-2010 ರಂದು ಗ್ರಾಮ ಪಂಚಾಯತಿ ಚುನಾವಣೆ ಮತಎಣಿಕೆ ನಿಮಿತ್ಯ ಮಹಾಂತೇಶ್ವರ ವಿದ್ಯಾವರ್ದಕ ಶಿಕ್ಷಣ ಸಂಸ್ಥೆಯಲ್ಲಿ ಬೆಳಿಗ್ಗೆ ಸಿಬ್ಬಂದಿಗಳ ರೋಲಕಾಲ ತೆಗೆದುಕೊಂಡು ಸಿಬ್ಬಂದಿಗಳನ್ನು ಆಯಾ ಕರ್ತವ್ಯಕ್ಕೆ ನಿಯೋಜನೆ ಮಾಡಿರುತ್ತೇನೆ. ಸದರಿ ಸಂಸ್ಥೆಯ ಮುಖ್ಯದ್ವಾರದಲ್ಲಿ HC-332, 246, PC-1559, 1461, 1420, 1498, 1416, 1344, 1341, 735, 31, WPC-194 ರವರನ್ನು ಮುಖ್ಯದ್ವಾರದ ಬಳಿ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಸದರಿಯವರುಗಳಿಗೆ ಗ್ರಾಮ ಪಂಚಾಯತಿ ಚುನಾವಣೆ ಅಭ್ಯರ್ಥಿ ಮತ್ತು ಅವರ ಏಜಂಟುಗಳ ಗುರುತಿನ ಚೀಟಿ ಪರಿಶೀಲಿಸಿ ಒಳಗಡೆ ಬಿಡಲು ಮಾರ್ಗಸೂಚಿ ನೀಡಲಾಗಿತ್ತು. ಬೆಳಿಗ್ಗೆ 8 ರಿಂದ 8-25 ರವರೆಗೆ ಸುವ್ಯವಸ್ಥೆಯಾಗಿ ಕರ್ತವ್ಯ ನಡೆದಿತು. ಸುಮಾರು 8-30 ಗಂಟೆಗೆ ಅಲ್ಲಿ ಕೆಲವು ಗುಂಪಿನ ಜನರು ನಮಗೆ ಎಣಿಕೆ ಸರಿಯಾಗಿ ಕೇಳಿಸುತ್ತಿಲ್ಲ ಅದಕ್ಕಾಗಿ ಧ್ವನಿವರ್ಧಕದ ಧ್ವನಿಯನ್ನು ಹೆಚ್ಚಿಸಲು ಜೋರಾಗಿ ಕೂಗಾಟ

ಮಾಡುತ್ತಿದ್ದರು. ಆಗ ನಾವು ತಾಲೂಕ ತಹಶೀಲ್ದಾರ ರವರಿಗೆ ಸದರಿ ವಿಷಯ ತಿಳಿಸಿ ಧ್ವನಿ ವರ್ದಕ ಧ್ವನಿ ಹೆಚ್ಚಿಸಿದೆವು. ಆದರೂ ಕೂಡಾ ಸದರಿ ಗುಂಪಿನವರು ಸರಿಯಾಗಿ ಕೇಳಿಸುತ್ತಿಲ್ಲ ಎಂದು ದಂಗೆ ಪ್ರಾರಂಭಿಸಿದರು. ಆಗ ಚಾಸಾ 1, ಅವರು ನೇಮಿಸಿದ ಸಿಬ್ಬಂದಿಗಳು ಸದರಿ ಗುಂಪಿನ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ ತಿಳುವಳಿಕೆ ನೀಡುತ್ತಿದ್ದರು. ಆಗ ಯಾರೋ ದುಷ್ಕರ್ಮಿಗಳು ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಾ ಕಲ್ಲು ಎಸೆದಿರುತ್ತಾರೆ. ಆಗ ಸದರಿ ಎಸೆದ ಕಲ್ಲು ಚಾಸಾ 1 ರವರಿಗೆ ತಾಗಿ ತಲೆ ಹಿಂಭಾಗದಲ್ಲಿ ರಕ್ತಗಾಯ ವಾಗಿರುತ್ತದೆ ಮತ್ತು ಸಿಬ್ಬಂದಿ ಸಹ ಗಾಯಗಳಾಗಿರುತ್ತವೆ. ನಂತರ ಸದರಿ ಗುಂಪಿನ ಜನರು ಗೇಟು ತೆಗೆದು ಆವರಣದಲ್ಲಿ ನುಗ್ಗಿದ್ದರಿಂದ ಮತ್ತು ಚುನಾವಣಾ ಮತ ಎಣಿಕೆ ಸುಗಮವಾಗಿ ಮತ್ತು ಚುನಾವಣಾ ನೀತಿ ಸಂಹಿತೆ ಪ್ರಕಾರ ಮತ ಎಣಿಕೆ ಕೇಂದ್ರದಿಂದ 100 ಮೀಟರ ಅಂತರದಲ್ಲಿ ಸಾರ್ವಜನಿಕರು ಸೇರಬಾರದು ಎಂದು ಇರುವುದರಿಂದ ಸದರಿ ಗುಂಪನ್ನು ಚೆದುರಿಸಲು ಸಾಗಲು ಲಘು ಪ್ರಹಾರ ಮಾಡಿರುತ್ತಾರೆ.

ಸದರಿ ಗುಂಪಿನ ಜನರು ನಮ್ಮ ಕರ್ತವ್ಯಕ್ಕೆ ಅಡೆತಡೆ ಉಂಟುಮಾಡಿದರಿಂದ ಮತ್ತು ಕರ್ತವ್ಯನಿರತ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿದರಿಂದ ಈ ಪ್ರಕರಣ ದಾಖಲಿಸಿರುತ್ತೇವೆ. ಈ ಪ್ರಕರಣ ಚಾಸಾ 1 ರವರು ನೀಡಿರುತ್ತಾರೆ. ನಾನು ಚಾಸಾ 20 ರವರಿಂದ ಈ ಪ್ರಕರಣ ಕಡತ ಪಡೆದುಕೊಂಡು ಮುಂದಿನ ತನಿಖೆಗಾಗಿ ಚಾಸಾ 23 ರವರಿಗೆ ಸಲ್ಲಿಸಿರುತ್ತೇನೆ.

ನನ್ನ ತನಿಖೆ ಅವದಿಯಲ್ಲಿ ಸಿಬ್ಬಂದಿಯನ್ನುನೇಮಿಸಿ ಸದರಿ ಘಟನೆಯಲ್ಲಿ ಭಾಗವಹಿಸಿದ ವ್ಯಕ್ತಿಗಳನ್ನು ಗುರುತಿಸಲು ತಿಳಿಸಿರುತ್ತೇನೆ. ದಿಃ 18-05-2010 ರಂದು ನಾನು ಗುನ್ಹೆಸ್ಥಳಕ್ಕೆ ಭೇಟಿ ನೀಡಿ ಶರಣಪ್ಪ ಮತ್ತು ಗುರಪ್ಪ ಎನ್ನು ವವರನ್ನು ಸ್ಥಳಕ್ಕೆ ಕರೆಸಿ ಪಂಚನಾಮೆ ವಿಷಯ ತಿಳಿಸಿ ಅವರು ಒಪ್ಪಿದ್ದರಿಂದ ಅವರು ಮತ್ತು ಚಾಸಾ 1 ರವರ ಸಮಕ್ಷಮ ಗುನ್ಹೆಸ್ಥಳ ಪಂಚನಾಮೆ ಮಾಡಿ ಸಹಿ ಪಡೆದಿರುತ್ತೇನೆ. ಮತ್ತು ಗುನ್ಹೆಸ್ಥಳದಲ್ಲಿ ಬಿದ್ದಿದ್ದ 4 ಹಿಡಿಗೈ ಗಾತ್ರದ ಕಲ್ಲುಗಳನ್ನು ಜಪ್ತಿಪಡಿಸಿಕೊಂಡು ಅವುಗಳಿಗೆ ಪಂಚರ ಸಹಿವುಳ್ಳ ಚೀಟಿಗಳನ್ನು ಅಂಟಿಸಿರುತ್ತೇನೆ. ಅದೇ ದಿನ ಚಾಸಾ 4 ರಿಂದ 15 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ಆರೋಪಿತರನ್ನು ಪತ್ತೆ ಹಚ್ಚಿ ಬಂದಿಸಲು ಉಪನಿರೀಕ್ಷಕರ ನೇತೃತ್ವದಲ್ಲಿ ಒಂದು ತಂಡ

ರಚಿಸಿರುತ್ತೇನೆ. ಸದರಿ ತಂಡದವರು ಸಲ್ಲಿಸಿದ ವರದಿಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ 27-04-2011 ರಂದು ಚಾಸಾ 1, 4 ರಿಂದ 15 ರವರ ಮರುಹೇಳಿಕೆಗಳನ್ನು ಪಡೆದಿರುತ್ತೇನೆ. ಸದರಿಯವರ ಮರುಹೇಳಿಕೆಯಲ್ಲಿ ಅವರುಗಳ ಪತ್ತೆಹಚ್ಚಿದ ಆರೋಪಿಗಳ ಹೆಸರುಗಳನ್ನು ತಿಳಿಸಿರುತ್ತಾರೆ. ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ 15-05-2011 ರಂದು ಒಟ್ಟು 36 ಜನ ಆರೋಪಿತರ ಮೇಲೆ ಪ್ರಕರಣ ದಾಖಲಿಸಿ ಆರೋಪಿತರು ತಲೆಮರೆಸಿಕೊಂಡಿರುತ್ತಾರೆಂದು ತೋರಿಸಿ ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಗುನ್ಹೆಸ್ಥಳ ಪಂಚನಾಮೆ ಪ್ರತಿಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-**2** ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ-**2(**ಬಿ**)** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಚಾಸಾ 1 ರವರ ಗಾಯದ ಪ್ರಮಾಣ ಪತ್ರದ ಪ್ರತಿಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-**3** ಎಂದು ಸಾಕ್ಷಿ ಸಹಿಯನ್ನು ನಿಪಿ-**3(**ಎ**)** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಆರೋಪಿ ಪತ್ತೆ ಕುರಿತು HC-510, PC-684, PC-1567 ರವರು ಸಲ್ಲಿಸಿದ ವರದಿಯ ಪ್ರತಿಗಳನ್ನು ತೋರಿಸಿದ್ದು ಸಾಕ್ಷಿ ಅವುಗಳಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ-**4** ರಿಂದ **6** ಎಂದು ಸಾಕ್ಷಿ ಸಹಿಯನ್ನು ನಿಪಿ-**4(**ಎ**)** ರಿಂದ ನಿಪಿ-**6(**ಎ**)** ಎಂದು ಗುರುತಿಸಲಾಯಿತು.

ಸಾಕ್ಷಿಗೆ PC-842 ರವರು ಪ್ರ.ವ.ವ. ನ್ಯಾಯಾಲಯಕ್ಕೆ ಸಲ್ಲಿಸಿದ ವರದಿಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-**7** ಎಂದು ಸಾಕ್ಷಿ ಸಹಿಯನ್ನು ನಿಪಿ-**7(**ಎ**)** ಎಂದು ಗುರುತಿಸಲಾಯಿತು.

ಆರೋಪಿತರು ಬಳಸಿದ 4 ಹಿಡಿಗಾತ್ರದ ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀಸವಾಲುಃ ಆರೋಪಿತರ ಪರ **SSP** ವಕೀಲರ ಪರವಾಗಿ ಶ್ರೀಮತಿ **SMA** ವಕೀಲರಿಂದ :-</u>

ಚುನಾವಣೆ ಮತ ಎಣಿಕೆ ದಿನ ಇರುವುದರಿಂದ ಸಾಕಷ್ಟು ಜನ ಸೇರಿದ್ದರು ಎಂದರೆ ಸರಿ. ಅಲ್ಲಿ ಸೇರಿದ ವ್ಯಕ್ತಿಗಳನ್ನು ವಿಚಾರಿಸಿ ಅವರ ಹೇಳಿಕೆ ಪಡೆದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಆ ಘಟನೆ ನಂತರ ಅವರು ಚೆದುರಿ ಹೋಗಿರುತ್ತಾರೆ, ಆದರಿಂದ ಹೇಳಿಕೆ ಪಡೆಯಲು ಆಗಿರುವುದಿಲ್ಲ. ಗುನ್ಹೆಸ್ಥಳ ಪಂಚರನ್ನು ನಮ್ಮ ಸಿಬ್ಬಂದಿ ಕರೆತಂದಿರುತ್ತಾರೆ. ಚಾಸಾ 1 ರವರು ನಮ್ಮ ಸಿಬ್ಬಂದಿ ಇರುವುದರಿಂದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ **- ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ